Mr. SPEAKER.—Under sub-rule (2) of Rule 240 of the Rules of Procedure and Conduct of Business in the Mysore Legislative Assembly, I nominate the Hon'ble Minister in charge of the Department, namely, the Minister of Law as a Member of the Joint Select Committee.

OFFICIAL RESOLUTION *re*: APPROVAL OF THE DRAFT RULES, *viz.* COTTON TRANSPORT (MYSORE) RULES, 1963.

Sri G. NARAYANA GOWDA (Minister for Agriculture).—Sir, I move:

> "That the following draft rules called the Cotton Transport (Mysore) Rules, 1963, which it is proposed to make in exercise of the powers conferred by Section 7 of the Cotton Transpart Act, 1923 (Central Act 3 of 1923), be approved."

Mr. SPEAKER.—Resolution moved:

> "That the following draft rules called the Cotton Transport (Mysore) Rules, 1963, which it is proposed to make in exercise of the powers conferred by Section 7 of the Cotton Transport Act, 1923 (Central Act 3 of 1923), be approved."

Sri H. R. KESHAVA MURTHY.—I want a clarification from the Chair, Sir. Now there is no Central Act after the Independence. This Act refers to the pre-Independence Act.

Mr. SPEAKER.—Let me see: I have not been able to go fast. I always go a little slow. Does the member concede that the Act is in force?

Sri H. R. KESHAVA MURTHY.—I have caught your point, Sir. I only request the chair to kindly help me when the Act he is bringing is not in force and when it relates to pre-Independence period, how can we draft rules?

Mr. SPEAKER.—Does the Hon'ble Member think that all those Acts are wiped out because of Independence? To the extent they are repugnant to the provisions of the Constitution, they shall be deemed to be abrogated. Otherwise, they are all in force.

† ಶ್ರೀ ಜಿ. ನಾರಾಯಣಗೌಡ.—ಸ್ವಾಮೀ, 1923ನೇ ಇಸವಿಯಲ್ಲಿ ಆಗಿದ್ದ ಕಾಟನ್ ಕಾನೂನಿನ ಏಳನೇ ಸೆಕ್ಷನ್ನಿನ ಪ್ರಕಾರ ಈ ರಾಜ್ಯ ಸರಕಾರಕ್ಕೆ ಇಂತಹ ರೂಲ್ಸುಗಳನ್ನು ಮಾಡುವುದಕ್ಕೆ ಅಧಿಕಾರವನ್ನು ಕೊಡಲಾಗಿದೆ. ಈ ಕಾನೂನು ಪ್ರಕಾರವಾಗಿ ನಮ್ಮಲ್ಲಿರುವ ಹತ್ತಿಯ ಕ್ವಾಲಿಟಿ ಮತ್ತು ರೆಪ್ಯೂಜೇಷನ್ನು ಇವುಗಳನ್ನು ಸರಿಯಾಗಿಟ್ಟುಕೊಳ್ಳುವುದಕ್ಕೋಸ್ಕರ ಈ ಕಾನೂನನ್ನು ಮಾಡಿಸಿರುವುದು ಇದರಲ್ಲಿರುವ ಮೂರನೇ ಸೆಕ್ಷನ್ನಿನ ಪ್ರಕಾರ ಪ್ರೊಟೆಕ್ಟೆಡ್ ಏರಿಯಾ ಎಂದು ಯಾವುದಾದರೂ ಏರಿಯಾವನ್ನ ನೋಟಿಫೈ ಮಾಡುವುದಕ್ಕಾಗಿ ರಾಜ್ಯ ಸರಕಾರಗಳಿಗೆ ಇದರಲ್ಲಿ ಒಂದು ಅಧಿಕಾರ ಕೊಟ್ಟಿದ್ದಾರೆ. ಇದರ ಪ್ರಕಾರ ಪ್ರೊಟೆಕ್ಟೆಡ್ ಏರಿಯಾದೊಳಗೆ ಬೇರೆ ಹತ್ತಿಯನ್ನು ತೆಗೆದುಕೊಂಡು ಹೋಗಬೇಕಾದರೆ, ಅದಕ್ಕೋಸ್ಕರ ಲೈಸೆನ್ಸು ಪಡೆದು ಹೋಗಬೇಕು. ಉದಾಹರಣೆಯಾಗಿ ಪ್ರೊಟೆಕ್ಟೆಡ್ ಏರಿಯಾಗೋಸ್ಕರ ಹಾಸಿಗೆ ಮಾಡುವುದಕ್ಕೆ ಬೇರೆ ಹತ್ತಿ, Long staple and short staple ಇತ್ಯಾದಿಗಳನ್ನು ಕೊಳ್ಳಬೇಕಾದರೆ ನಿರ್ಬಂಧವಿದೆ ಮತ್ತು ಇದಕ್ಕೆ ಲೈಸನ್ಸು ಬೇಕಾಗುತ್ತದೆ. ಲೈಸನ್ಸು ಕೊಡುವಾಗ ಯಾವ ಯಾವ ಷರತ್ತುಗಳಿರಬೇಕು, ಯಾರು ಕೊಡಬೇಕು, ಹೇಗೆ

ಕೊಡಬೇಕು ಎನ್ನುವ ಕಂಡಿಷನ್ನುಗಳನ್ನೆಲ್ಲಾ ಏಳನೇ ಸೆಕ್ಷನ್ನಿನಲ್ಲಿ ಕೊಡಲಾಗಿದೆ. ಈ ಸೆಕ್ಷನ್ನಿನ ಪ್ರಕಾರ ರಾಜ್ಯ ಸರಕಾರವೂ ಕೂಡ ರೂಲ್ಸುಗಳನ್ನು ಮಾಡಿ ಈ ಸಭೆಯ ಮುಂದೆ ಇಲ್ಲಿ ಮಂಡಿಸಲಾಗಿದೆ. ಇದನ್ನೆಲ್ಲಾ ಬಹುಶಃ ಮಾನ್ಯ ಸದಸ್ಯರು ಈಗಾಗಲೇ ಓದಿರಬಹುದು. ಇದನ್ನು ಎಲ್ಲ ಮಾನ್ಯ ಸದಸ್ಯರೂ ಒಪ್ಪಿಕೊಳ್ಳಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಪಿ. ಬಿ. ಬೊಮ್ಮಣ್ಣ (ಅರಸೀಕೆರೆ).—ಸ್ವಾಮೀ, ಪ್ರೊಜೆಕ್ಟೆಡ್ ಏರಿಯಾದಲ್ಲಿ ಕಾಟನ್ನನ್ನು ತೆಗೆದುಕೊಳ್ಳುವುದಕ್ಕಾಗಿ ಇಲ್ಲಿ ತಂದಿರುವ ನಿಯಮಗಳ ಬಗ್ಗೆ ನಾಲ್ಕು ಮಾತುಗಳನ್ನು ಹೇಳಲು ಅಪೇಕ್ಷಿಸುತ್ತೇನೆ.

ಸರಕಾರದವರು ಹತ್ತಿಯ ವಿಷಯದಲ್ಲಿ ಕೈಹಾಕಿ ಪ್ರೊಜೆಕ್ಟೆಡ್ ಏರಿಯಾ ಎಂದು ಮಾಡಿ ಬಿಟ್ಟು ಬೀಜವನ್ನು ಸರಿಯಾಗಿ ಸಪ್ಲೈ ಮಾಡದೇ ಬಹಳ ಅನ್ಯಾಯವಾಗುತ್ತಿದೆ. ಇದರಿಂದ ಅರಸೀಕೆರೆ ತಾಲ್ಲೂಕಿನಲ್ಲಿ ಪ್ರತಿಯೊಬ್ಬರೂ 50-100ಮಣದಷ್ಟು ಹತ್ತಿಯನ್ನು ಬೆಳೆದು ಲಾಭ ಹೊಂದುತ್ತಿದ್ದರು M. H. 5.-ಎನ್ನುವಂತಹ ಒಂದು ಜಾತಿಯ ಬೀಜವನ್ನು ತಂದು ಅದನ್ನು ಅರಸೀಕೆರೆ, ಹಳೇಬೀಡು, ಬೇಲೂರುಗಳಲ್ಲಿ ಕೊಟ್ಟು ಇಂತಹ ಹತ್ತಿಯನ್ನು ಬೆಳೆಯಬೇಕೆಂದು ಬಂದಿದ್ದಾರೆ. ಇದರಿಂದ ಹೆಚ್ಚಿನ ಅನುಕೂಲ ಸಿಗದೆ ರೈತರಿಗೆ ತೊಂದರೆಯಾಗುತ್ತಿದೆ. ಅಂತಹುದರಲ್ಲಿ ಈ ತರಹ ರೂಲ್ಸುಗಳನ್ನು ಸರಕಾರದವರು ತರುತ್ತಿದ್ದಾರೆ. ಆದರೆ ಇದರಿಂದ ಪ್ರೊಜೆಕ್ಟೆಡ್ ಏರಿಯಾದಲ್ಲಿರುವ ರೈತರಿಗೆ ತೊಂದರೆಯಾಗುವುದನ್ನು ತಪ್ಪಿಸಿಕೊಡಬೇಕೆಂದು ನಾನಿಲ್ಲಿ ಸೂಚಿಸುತ್ತೇನೆ.

†ಶ್ರೀ ಎಚ್. ಆರ್. ಕೇಶವ ಮೂರ್ತಿ.—ಸ್ವಾಮಿ, ಈ ಟ್ರಾನ್ಸ್‌ಪೋರ್ಟ್ ರೂಲ್ಸುಗಳನ್ನೇನೋ ಮಾಡಿದ್ದಾರೆ. ಇಂತಹ ರೂಲ್ಸುಗಳನ್ನು ಮಾಡಿ ರೈತಾಪಿ ವರ್ಗದವರಿಗೆ ತೊಂದರೆಯಾಗುತ್ತಿದೆ. ನಮ್ಮ ಏರಿಯಾದಲ್ಲಿ ಪಿ. ಬಿ. 3 ಮತ್ತು ಕುಡ್ಲಿಗಿ ಕಾರ್ಟ್ ಎಂದು ತಯಾರಿಸುತ್ತಿದ್ದರು. ಇದರಲ್ಲಿ ಇಳುವರಿ ಬರುತ್ತಿತ್ತು. ಇದನ್ನು ಮುಂದುವರಿಸಿಕೊಂಡು ಪುನಃ ವಿಮರ್ಶೆಮಾಡಬೇಕೆಂದು C. O. 4 ಮತ್ತು M. A. 2 ಎನ್ನುವ ವೆರೈಟಿಗಳು ಬಂತು. ಇವೆಲ್ಲವನ್ನು ವ್ಯವಸಾಯ ಇಲಾಖೆಯವರು ಇನ್ನುಮುಂದೆ ಪರಿಷ್ಕರಿಸಿದ್ದೇವೆ ಎಂದು. M. A. S cotton ಎನ್ನುವ ಬೀಜದ ವೆರೈಟಿ ತಂದು ಹಂಚಲು ಹೊರಟಿದ್ದಾರೆ. ಹೀಗೆ ಹಂಚಿಕೆಯಾಗುತ್ತಿರುವ ಈ ಬಿಲ್‌ಗಳನ್ನು ರೈತರು ಹಾಗೂ ವರ್ತಕರು ತಲೆಯಲ್ಲಿ ಕಟ್ಟಿಕೊಂಡು ಹತ್ತಿ ಬೆಳೆಯಬೇಕೆಂದು ಅವಕಾಶ ಮಾಡಿಕೊಟ್ಟಿದ್ದಾರೆ. ರೈತರ ದೃಷ್ಟಿಯಿಂದ ಹೇಳುವುದಾದರೆ, ಪರಿಷ್ಕೃತವಾದ ಬೀಜವನ್ನು ಹೊರಗಿನಿಂದ ತಂದು ಹತ್ತಿಯನ್ನು ಬೆಳೆಯುವುದನ್ನು ನೋಡಿದರೆ ಇದರಿಂದ ಸರಿಯಾದ ಬೆಳೆಯೂ ಬರದೇ ರೈತರಿಗೆ ತುಂಬಾ ಹಾನಿಯಾಗುತ್ತದೆ. ಇವರಿಗೆ ಸರಿಯಾದ ಬೀಜಗಳನ್ನು ನೋಡಿ ಹಂಚಬೇಕು. ಹಿಂದೆ ಸ್ವಲ್ಪ ಒರಟು ಹತ್ತಿ ಎಂದು ಕೊಡುತ್ತಿದ್ದರು ಅದರಿಂದ ಇಳುವರಿಯೂ ಕೂಡ ಚೆನ್ನಾಗಿ ಬರುತ್ತಿತ್ತು. ಆದರೆ ಈಗ ಕೊಡುತ್ತಿರುವ ಹತ್ತಿ ಬೀಜಗಳಲ್ಲಿ ಇಳುವರಿಯೂ ಸರಿಯಾಗಿ ಬರುತ್ತಿಲ್ಲ. ಅಲ್ಲದೆ ಇದರ ಬೆಳೆ ಮಾಡುವಾಗ ಬೆಳೆಗೆ ಕಾಯಿಲೆಗಳು ಬಂದು ಉತ್ಪತ್ತಿಯೂ ಜಾಸ್ತಿಯೂ ಆಗುತ್ತಿಲ್ಲ. ಇದರಿಂದ ರೈತರಿಗೆ ತೊಂದರೆಯಾಗುತ್ತದೆಯೇ ಹೊರತು ಅನುಕೂಲವಾಗುತ್ತಿಲ್ಲ. M. A. 5 ಎಂದು ಕೊಡುತ್ತಿರುವ ಬೀಜದಲ್ಲಿ ಶೇಕಡಾ ಇಪ್ಪತ್ತೈದು ಭಾಗ ಬೆಳೆಯಾಗುತ್ತದೆ. ಉಳಿಕೆಯಾದ ಎಪ್ಪತ್ತೈದು ಭಾಗ ಬೆಳೆ ಹಾಳಾಗುತ್ತದೆ. ಇನ್ನುಮುಂದೆ 14 D. W. ಎಂದು ಬೇರೆ ಕಂಡು ಹಿಡಿದು sea Island cotton ಎನ್ನುವುದನ್ನು ಹೆಚ್ಚಿಗೆ ಮಾಡಬೇಕೆಂದು ತರುತ್ತಿದ್ದಾರೆ. ಇಂತಹ ಬೀಜಗಳನ್ನು ಸಮುದ್ರದ ಪ್ರದೇಶಗಳಲ್ಲಿ ಬೆಳೆಯಾಗುತ್ತದೆಯೇ ಹೊರತು ನಮ್ಮ ಭಾಗದಲ್ಲಿ ಚೆನ್ನಾಗಿ ಆಗುವುದಿಲ್ಲ: ತಿಳುವಳಿಕೆ ಇಲ್ಲದಿರುವ ನಮ್ಮ ರೈತರಿಗೆ ಇಂತಿಂತಹ ನಿರ್ಬಂಧಗಳನ್ನು ಹೆಚ್ಚು ಹೆಚ್ಚಾಗಿ ಹಾಕುತ್ತಾ ಬಂದರೆ ಇದರಿಂದ ರೈತರಿಗೆ ಬಹಳ ತೊಂದರೆಯಾಗುತ್ತದೆ. ಈ ದೃಷ್ಟಿಯಿಂದ ಇಂತಹ ಬದಲಾವಣೆಗಳನ್ನು ಹೊರಗಡೆಯಿಂದ ತರಕೂಡದು. ಅಲ್ಲದೆ ಇದರ ಹತೋಟಿಗಾಗಿ ರೂಲ್ಸುಗಳನ್ನು ಬೇರೆ ಪ್ರಿಸ್ಕ್ರೈಬು ಮಾಡಿರುತ್ತಾರೆ. ಆದರೆ ಈಗ M. A. 5 ಎಂದು ಉಪಯೋಗ ಮಾಡಬೇಕು ಎಂದರೆ ಜೆನ್ ಮಾಡಿರುವ ಕಾಟನ್ನಿಗೆ ಬೆರಸಿ ಇದನ್ನು ಬೇರೆ ಬೇರೆ ರೀತಿಯಿಂದ ಮಾರಿ ಲಾಭ ಸಂಪಾದಿಸುತ್ತಾರೆ.

ಶ್ರೀ ಜಿ. ನಾರಾಯಣ ಗೌಡ.—ಬಹುಶಃ ತಾವು ಏನು ಹೇಳುತ್ತಿದ್ದೀರೊ ಅದನ್ನು ತಪ್ಪಿಸುವುದಕ್ಕೊಸ್ಕರ ಈ ನಿಬಂಧನೆಗಳನ್ನು ತಂದಿರುವುದು.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಈ ರೂಲ್ಸುಗಳ ಮಧ್ಯೆ ತಪ್ಪಿಸಿಕೊಂಡು ಹೋಗುವುದಕ್ಕೆ ಸಾಧ್ಯವಿದೆ. ನೀವು ಹೆಚ್ಚು ಹೆಚ್ಚು ಕಾನೂನುಗಳನ್ನು ಮಾಡಿದಂತೆಲ್ಲಾ, ವರ್ತಕರು ಬುದ್ಧಿವಂತರು ಕಾನೂನಿನಿಂದ ದುಡ್ಡು ಸಂಪಾದಿಸಿಕೊಳ್ಳುತ್ತಾರೆ, ರೈತರಿಗೆ ತುಂಬ ತೊಂದರೆಯಾಗುತ್ತದೆ. ಸರಕಾರದವರು ಇಂತದೆ ಬೀಜ ಕೊಟ್ಟು ಅದೇ ಹತ್ತಿ ಬೆಳೆಯಿರಿ ಅಂದರೆ, ನಿರ್ಬಂಧ ಮಾಡಿದರೆ ಬೇರೆ ಹತ್ತಿ ಬೆಳೆಯುವುದಕ್ಕೆ ಅವಕಾಶವೂ ಇಲ್ಲ- ಹೊರಗಡೆಯಿಂದ ಬೀಜ ತಂದು ಬೆಳೆಯುವುದಕ್ಕೆ ಅವಕಾಶ ಕೊಡಿ.

ಶ್ರೀ ಜಿ. ನಾರಾಯಣ ಗೌಡ.—ಶ್ರೀ ಕೇಶವಮೂರ್ತಿಯವರು ಹೇಳಿದ ಹಾಗೆ ಉತ್ತಮವಾದ ಕ್ಯಾಲಟಿ ಬೆಳಸಬೇಕೆಂದು ಇದ್ದೇವೆ. ಆದರೆ ಅದನ್ನು ಬೆಳೆಸುವುದಕ್ಕೆ ತೊಂದರೆಗಳಿವೆ. ಬೇರೆ ಬೇರೆ ಬೀಜ ಸೇರಿಬಿಟ್ಟು ಉತ್ತಮವಾದ ಬೀಜ ಡಿಟಿರಿಯೊರೇಟ್ ಆಗುತ್ತಿದೆ. ಅದಕ್ಕೋಸ್ಕರ ಕಾಟನ್ ಟ್ರಾನ್ಸ್‌ಪೋರ್ಟ್ ರೂಲ್ಸ್ ಮಾಡಿ, ಪ್ರೊಟೆಕ್ಟೆಡ್ ಏರಿಯ ಅಂತ ಇಟ್ಟಿದ್ದೇವೆ, ಇಂಪೋರ್ಟಿಗೆ ರೈಸೆನ್ಸ್ ತೆಗೆದುಕೊಳ್ಳಬೇಕು. ಹೊರಗಡೆ ಕಳುಹಿಸುವುದನ್ನು ತಡೆಗಟ್ಟಿದೆ. ಏಕೆಂದರೆ ಕೆಲವು ಸಂದರ್ಭಗಳಲ್ಲಿ ಕೆಳದರ್ಜೆ ಹತ್ತಿ ಸೇರಿಸಿಬಿಟ್ಟು ಅದನ್ನು ಕಳುಹಿಸಿದಾಗ ರಪ್ಯುಟೇಶನ್ ಕೆಟ್ಟು ಹೋಗುತ್ತದೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಬರಿ ಹತ್ತಿ ಪ್ರೊಹಿಬಿಟ್ ಮಾಡಿದರೆ ಸಾಲದು. Disease resistants, plants protection measures, manures, assured water supply—ಇವೆಲ್ಲಾ ಇರಬೇಕು. ಈ ತರಹ ಸೌಲಭ್ಯಗಳನ್ನು ನೀವು ಒದಗಿಸಿದ್ದರೆ ಏನು ಕಾಂಪೆನ್ ಸೇಷನ್ ನಷ್ಟವಾದರೆ ಕೊಡುತ್ತೀರ, ಲುಕ್ಸಾನನ್ನು ಹೇಗೆ ತಡೆಗಟ್ಟುವುದು ? ಏನು ಅನೂಕೂಲತೆಗಳನ್ನು ಸರ್ಕಾರ ಒದಗಿಸಿದೆ.

ಶ್ರೀ ಜಿ. ನಾರಾಯಣ ಗೌಡ.—ಹತ್ತಿ ಬೆಳೆಗಾರರಿಗೆ ಒಂದು ಎಕರೆಗೆ 500 ರೂಪಾಯಿವರೆಗೆ ಸಾಲ ಕೊಡುತ್ತೇವೆ. ಇನಿಸೆಕ್ಟಿಸೈಡ್ಸ್‌ನ್ನು ಸಬಸಿಡೈಸ್ಡ್ ರೇಟಿನಲ್ಲಿ ಕೊಡುತ್ತೇವೆ. ಸ್ಪ್ರೆಯರ್ಸ್ ಸಬ್‌ಸಿಡೈಸ್ಡ್ ರೇಟುಗಳಲ್ಲಿ ಕೊಡುತ್ತೇವೆ. ಕೊ-ಆಪರೇಟೀವ್ ಸೊಸೈಟಿಯವರು 500 ರೂಪಾಯಿವರೆಗೆ ಸಾಲ ಕೊಡುತ್ತಾರೆ.

Sri M. R. PATIL (Hubli).—Nowhere is it given and where it is given, it is not more than Rs. 50.

Mr. SPEAKER.—If it has not been given, it can now be asked for.

ಶ್ರೀ ಎಚ್. ಆರ್. ಕೇಶವಮೂರ್ತಿ.—ನನ್ನ ಕೋರಿಕೆ, ಸಲಹೆ ಇಷ್ಟು: ತಾವು ಪ್ರೊಟೆಕ್ಟೆಡ್ ಏರಿಯದಲ್ಲಿ ಬೆಳೆಯತಕ್ಕಂಥ ರೈತರಿಗೆ ಸರಿಯಾದ ಸಬ್‌ಸಿಡಿ ಕೊಡುವಂತೆ ರೂಲ್ಸನಲ್ಲಾದರೂ ಪ್ರೊವೈಡ್ ಮಾಡಬೇಕು. ರೈತರ ನಷ್ಟವನ್ನು ತಪ್ಪಿಸಿಡಿಸುವುದಕ್ಕಾಗಿ ಕಾಟನ್ ಟ್ರಾನ್ಸ್‌ಪೋರ್ಟ್ ಕಾನೂನು ಮಾಡಬೇಕು. ಅದರ ಜೊತೆಗೆ ರೈತರಿಗೆ ಪರಿಹಾರ ಕೊಡುವ ಕಾನೂನನ್ನು ಮಾಡಬೇಕು ಇಷ್ಟು ನನ್ನ ಅರಿಕೆ.

ಶ್ರೀ ಜಿ. ನಾರಾಯಣ ಗೌಡ.—ಇದಕ್ಕೆ ಒಂದು ಉದಾಹರಣೆ ಕೊಟ್ಟರೆ ಅರ್ಥವಾಗುತ್ತದೆ. ಈಗ ಸರ್ವೆಸಾಧಾರಣವಾಗಿ ಧಾರವಾಡ ಏರಿಯ, ಬೊಂಬಾಯಿ ರೂಲ್ಸ್ ಪ್ರಕಾರ ಪ್ರೊಟೆಕ್ಟೆಡ್ ಏರಿಯ ಆಗಿದೆ. ಧಾರವಾಡದ ಪಕ್ಕದಲ್ಲಿರುವ ಕುಷ್ಟಗಿ, ಎಲ್ಲಬುರ್ಗಿ, ಯಲ್ಲಾಪುರದಲ್ಲಿಯೂ ಹತ್ತಿ ಬೆಳೆಯುತ್ತಾರೆ. ಆದರೆ ಈ ಹತ್ತಿ ಅಲ್ಲಗೆ ಹೋಗುವ ಹಾಗಿಲ್ಲ. ಇವುಗಳನ್ನು ಪ್ರೊಟೆಕ್ಟೆಡ್ ಏರಿಯ ಮಾಡಿದರೆ ಈ ಜನಗಳಿಗೆ ಅನುಕೂಲವಾಗುತ್ತದೆ. ಈ ಅನುಕೂಲ ದೃಷ್ಟಿಯಿಂದ ಪ್ರೊಟೆಕ್ಟೆಡ್ ಏರಿಯ ಮಾಡುತ್ತಾ ಇರುವುದು.

ಶ್ರೀ ಪಿ. ಬಿ. ಬೊಮ್ಮಣ್ಣ.—ಪ್ರೊಟೆಕ್ಟೆಡ್ ಏರಿಯವಾಗಿ ಡಿಕ್ಲೇರ್ ಮಾಡುವುದಕ್ಕೆ ಮುಂಚೆ ಎಷ್ಟು ಹತ್ತಿ ಬರುತ್ತಾ ಇತ್ತು, ಆ ಮೇಲೆ ಎಷ್ಟು ಬರುತ್ತಿದೆ ಎಂಬ ಬಗ್ಗೆ ಅಂಕಿಅಂಶಗಳನ್ನು ಕೊಡುತ್ತೀರ ?

ಶ್ರೀ ಜಿ. ನಾರಾಯಣ ಗೌಡ.—ಆ ಅಂಕಿ ಅಂಶ ಈಗ ತಿಳಿಸುವುದಕ್ಕೆ ಆಗುವುದಿಲ್ಲ.

Mr. SPEAKER.—I will put the resolution to the vote of the House. The question is :

"That the following draft rules called the Cotton Transport (Mysore) Rules, 1963, which it is proposed to make in exercise of the power's conferred by Section 7 of the Cotton Transport Act, 1923 (Central Act 3 of 1923) be approved."

The motion was adopted.

MYSORE PREVENTION OF COW SLAUGHTER AND CATTLE PRESERVATION BILL, 1963.

Motion to consider

Sri M. V. KRISHNAPPA (Minister for Revenue).—Sir, I move:

"That the Mysore Prevention of Cow Slaughter and Cattle Preservation Bill, 1963, be taken into consideration."

Mr. SPEAKER.—Motion moved:

"That the Mysore Prevention of Cow Slaughter and Cattle Preservation Bill, 1963, be taken into consideration."

† ಶ್ರೀ ಎಂ. ವಿ. ಕೃಷ್ಣಪ್ಪ.—ಈ ಗೋಹತ್ಯ ನಿಷೇಧ ಮತ್ತು ಗೋಸಂರಕ್ಷಣೆ ಕಾನೂನು ಹೊಸದೇನೂ ಅಲ್ಲ. ಇದು ಹಿಂದಿನ ಮೈಸೂರು ಸಂಸ್ಥಾನದಲ್ಲಿ ಆಗಿದ್ದ ಅಸೆಂಬ್ಲಿಯಲ್ಲಿ 1948ನೆ ಇಸವಿಯಲ್ಲಿ ಪಾಸಾಗಿ, ಆಗಿನಿಂದಲೂ ಜಾರಿಯಲ್ಲಿತ್ತು. ಅದೇ ರೀತಿಯಲ್ಲಿ ಬೊಂಬಾಯಿ ಕರ್ನಾಟಕದಲ್ಲಿ 1954ನೆ ಇಸವಿಯಿಂದಲೂ ಜಾರಿಯಲ್ಲಿದೆ. ಅದಕ್ಕೆ Bombay Animal Preservation Act, 1954 ಎನ್ನುತ್ತಾರೆ. ಇಂಥ ಯಾವ ಕಾನೂನೂ ಮದ್ರಾಸ್ ಕರ್ನಾಟಕದಲ್ಲಿ, ಕೂರ್ಗ್‌ನಲ್ಲಿ ನಡ್ಯದಲ್ಲಿಲ್ಲ. ಆದ್ದರಿಂದ ಈ ಒಂದು ಕಾನೂನು ಒಂದು ಭಾಗದಲ್ಲಿರುವುದು, ಇನ್ನೊಂದು ಭಾಗದಲ್ಲಿ ಇಲ್ಲದಿರುವುದು ಸರಿಯಲ್ಲ. ಮುಖ್ಯವಾಗಿ ಈ ಮಸೂದೆಯ ಉದ್ದೇಶ ಕನ್ನಡ ದೇಶಕ್ಕೆಲ್ಲಾ ಒಂದು ಯೂನಿಫಾರಂ ಲಾ ಮಾಡಬೇಕೆಂಬುದು. ಎರಡನೆಯ ಉದ್ದೇಶವೇನೆಂದರೆ, ಮೇಲೆ ಹೇಳಿದ ಕಾನೂನುಗಳು ಜಾರಿಯಲ್ಲಿರುವಾಗ್ಯೆ ಸುಪ್ರೀಂ ಕೋರ್ಟ್ ಒಂದು ಜಡ್ಜ್‌ಮೆಂಟ್ ಬಹಾರಿಗೆ ಸಂಬಂಧಪಟ್ಟ ಒಂದು ಕೇಸ್‌ನಲ್ಲಿ ಬಂದಿತು. ಅದೇನೆಂದರೆ, ಈಗಿನ ರಾಜ್ಯಾಂಗದ ಪ್ರಕಾರ ಯಾವ ಸರಕಾರಕ್ಕೆ ಆಗಲಿ ಎಲ್ಲ ಪಶುಗಳನ್ನೂ ಹತ್ಯ ಮಾಡಬಾರದು ಎಂದು ನಿಷೇಧ ಮಾಡುವುದಕ್ಕೆ ಹಕ್ಕು ಇಲ್ಲವೆಂದು, ಅಂದರೆ ಸರಕಾರಕ್ಕೆ ಬೇಕಾದರೆ ಕೆಲವು ಪಶುಗಳನ್ನು ಮಾಡಿಕೊಳ್ಳಬಹುದೇ ವಿನಃ ರಾಜ್ಯಾಂಗದ ಪ್ರಕಾರ ಎಲ್ಲವನ್ನೂ ರಕ್ಷಣೆ ಮಾಡುವುದಕ್ಕಾಗುವುದಿಲ್ಲ. ಕಾನೂನು ಪ್ರಕಾರ ಹಸುಗಳನ್ನು ರಕ್ಷಣೆ ಮಾಡಬಹುದು, ಆದರೆ ಮುದಿ ಎತ್ತುಗಳೂ ಕೆಲಸಕ್ಕೆ ಬಾರದ ಎಮ್ಮೆಗಳನ್ನು ರಕ್ಷಣೆ ಮಾಡಲು ಅಧಿಕಾರವಿಲ್ಲವೆಂದು ತೀರ್ಪು ಕೊಟ್ಟಿದ್ದಾರೆ. ಆದಕ್ಕೆ ಅನುಸಾರವಾಗಿ ಮೈಸೂರು ಹೈ ಕೋರ್ಟಿನ ಒಂದು ಜಡ್ಜ್‌ಮೆಂಟೂ ಬಂದಿದೆ. ನಮ್ಮ ಹೈಕೋರ್ಟಿನವರೂ ರಾಜ್ಯಾಂಗದ ಪ್ರಕಾರ ಎಲ್ಲ ಪಶುಗಳ ಹತ್ಯವನ್ನೂ ನಿಷೇಧ ಮಾಡುವ ಅಧಿಕಾರ ಸರ್ಕಾರಕ್ಕೆ ಇಲ್ಲವೆಂದು ಜಡ್ಜ್‌ಮೆಂಟ್ ಕೊಟ್ಟಿದ್ದಾರೆ. ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ಜಡ್ಜ್‌ಮೆಂಟ್ ಗಮನದಲ್ಲಿಟ್ಟುಕೊಂಡು, ಈ ಕಾನೂನನ್ನು ತಿದ್ದುಪಡಿ ಮಾಡಿ, ಈ ಮಸೂದೆ ತರುತ್ತಿದ್ದೇವೆ.

ಹಸುಗಳನ್ನು ಕರುವಿನಿಂದ ಹಿಡಿದು ಅವು ಸಾಯುವವರೆಗೂ ಅವುಗಳನ್ನು ಹತ್ಯೆ ಮಾಡುವುದನ್ನೂ ಈ ಕಾನೂನು ನಿಷೇಧಿಸುತ್ತದೆ. ಮತ್ತು ಹಸುವಿನ ಮತ್ತು ಎಮ್ಮೆಯ ಕರುಗಳನ್ನೂ ಯಾರೂ ಕೊಲ್ಲಬಾರದು ಎಂದೂ ನಿಷೇಧಿಸುತ್ತದೆ. ಇತರ ಪ್ರಾಣಿಗಳನ್ನು ಎಂದರೆ ಎಮ್ಮೆಗಳು, ಎತ್ತುಗಳು ಇವುಗಳನ್ನು 14 ವರ್ಷ ವಯಸ್ಸಾದ ಮೇಲೆ ಕೊಲ್ಲಬಹುದು. 14 ವರ್ಷ ವಯಸ್ಸಾಗುವವರೆಗೂ ಇವು ರೈತನಿಗೆ ಉಪಯುಕ್ತವಾಗಿರುತ್ತವೆ. 14 ವರ್ಷ ವಯಸ್ಸಿಗೆ ಮೀರಿದ ಎತ್ತುಗಳು ಮತ್ತು ಎಮ್ಮೆಗಳನ್ನೂ ಸರ್ಟಿಫಿಕೇಟನ್ನು ಪಡೆದು ಕೊಲ್ಲಬಹುದು ಎಂದು ಇದರಲ್ಲಿ ಹೇಳಿದೆ. 14 ವರ್ಷ ವಯಸ್ಸಾದ ಮೇಲೆ ಅವು ನಿಷ್ಪ್ರಯೋಜನವಾಗುವುದರಿಂದ ಸುಪ್ರೀಂ ಕೋರ್ಟ್ ಮತ್ತು ಹೈ ಕೋರ್ಟ್‌ಗಳ ತೀರ್ಪನ್ನನುಸರಿಸಿ ಈ ರೀತಿ ಮಾಡಿದೆ. ಈ ಕಾನೂನಿನ ಉದ್ದೇಶವಿಷ್ಟೆ.

5-30 P.M.

ಎರಡನೆಯ ಕ್ಲಾಜಿನಲ್ಲಿ 'animal' ಎನ್ನುವುದನ್ನು define ಮಾಡಿದೆ. ನಾಲ್ಕನೆಯ ಕ್ಲಾಜಿನಲ್ಲಿ prohibition against slaughter ಎಂದು ಹೇಳಿದೆ, ಯಾವ ಯಾವ ಪ್ರಾಣಿಗಳನ್ನು ಕೊಲ್ಲಬಹುದು ಎಂದು ಐದನೆಯ ಕ್ಲಾಜಿನಲ್ಲಿ ಕೊಟ್ಟಿದೆ. 7, 8 ಮತ್ತು 9ನೆ ಕ್ಲಾಜುಗಳಲ್ಲಿ functions ಯಾವುವು ಎಂದು ಹೇಳಿದೆ. 12ನೆಯ ಕ್ಲಾಜ್‌ನಲ್ಲಿ ಇಂಥಿಂಥ functions ಗೆ ತಪ್ಪಿ ನಡೆದರೆ ಏನು ದಂಡ ವಿಧಿಸಬೇಕು ಎಂದು ಕೊಟ್ಟಿದೆ. ಕ್ಲಾಜ್ 15ರಲ್ಲಿ exemptions ಎಂದು

(ಶ್ರೀ ಎಂ. ವಿ. ಕೃಷ್ಣಪ್ಪ)

ಇದೆ. ಯಾವ ಕಾನೂನಿನಲ್ಲಾದರೂ ಏನಾಯಿತಿ ಇರಬೇಕಾಗುತ್ತದೆ. ಒಂದು ಪ್ರಾಣಿಗೆ ಯಾವುದಾದರೂ ರೋಗ ಬಂದಿದ್ದು, ಆ ಪ್ರಾಣಿ ಇದ್ದರೆ ಅದರಿಂದ ದೇಶಕ್ಕೆ ಅಪಾಯ, ಇತರ ಪ್ರಾಣಿಗಳಿಗೆ ಅಪಾಯವೆಂದು ಕಂಡುಬಂದರೆ ಈ exemption clause ಉಪಯೋಗಿಸಿಕೊಂಡು ಅದನ್ನು ಕೊಲ್ಲುವುದಕ್ಕೆ ವೆಟೆರಿನರಿ ಡಾಕ್ಟರು ಆರ್ಡರ್ ಮಾಡಬಹುದು. ಈ ಕಾನೂನು ಪ್ರಕಾರ ಹಸುಗಳನ್ನು ಕೊಲ್ಲಬಾರದು. ಆದರೆ ಅದಕ್ಕೆ ಕೆಟ್ಟ ರೋಗ ಬಂದರೆ ಆದರಿಂದ ಬೇರೆ ಹಸುಗಳಿಗೆ ಅನರ್ಥವಾಗುತ್ತದೆ. ಅಂಥ ಸಂದರ್ಭದಲ್ಲಿ ಆ ಹಸುವನ್ನು ಕೊಲ್ಲಬೇಕು ಎಂದರೆ, ಈ exemption clause ಉಪಯೋಗಿಸಿಕೊಂಡು ವೆಟೆರಿನರಿ ಡಾಕ್ಟರು ಅದನ್ನು ಕೊಲ್ಲುವುದಕ್ಕೆ ಪರ್ಮಿಷನ್ ಕೊಡಬೇಕು ಎಂದು ಇದರಲ್ಲಿದೆ.

ಕ್ಲಾಜ್ 3 ಮತ್ತು 6 ರ ಪ್ರಕಾರ ಸರ್ಕಾರ ಕೆಲವು ಅಧಿಕಾರಗಳನ್ನು ಪಡೆಯುತ್ತದೆ.

ಕ್ಲಾಜ್ 20ರಲ್ಲಿ ಕೆಲವು ಸಂಸ್ಥೆಗಳು ಹಸುಗಳನ್ನು ಕೊಲ್ಲಬಾರದು ಎಂದು ಅವುಗಳನ್ನು ಸಂರಕ್ಷಣೆ ಮಾಡುವ ಉದ್ದೇಶದಿಂದ ಮುಂದೆ ಬರುತ್ತವೆ. ಅನೇಕ ರೈತರು ಹಸುಗಳು ಮುದಿಯಾದರೂ ಸಹ ಅವು ಹಾಲು ಕೊಟ್ಟಿವೆ, ಅದರ ಹಾಲು ಕುಡಿದಿದ್ದೇವೆ. ಅದು ತಾಯಿಯ ಸಮಾನ ಎಂದು ಅದನ್ನು ಮುದಿ ವಯಸ್ಸಿನಲ್ಲಿ ನೋಡಿಕೊಳ್ಳುತ್ತಾರೆ. ಕೆಲವರು ಅಂಥ ಹಸುಗಳನ್ನು ನೋಡಿಕೊಳ್ಳುವುದಿಲ್ಲ. ಅವುಗಳನ್ನು ಮಾರಿಬಿಡುತ್ತಾರೆ. ಇಂಥ ಹಸುಗಳನ್ನು ನೋಡಿಕೊಳ್ಳುವವರು ಯಾರು? ಅಂಥ ಪರಿಸ್ಥಿತಿಯಲ್ಲಿ ಸರ್ಕಾರ ಗೋ ಸದನಗಳನ್ನು ಮಾಡಲು ಅವಕಾಶವಿರಬೇಕಾಗುತ್ತದೆ. ಕೇಂದ್ರ ಸರ್ಕಾರ ಎಲ್ಲ ಸಂಸ್ಥಾನಗಳಲ್ಲಿಯೂ ಗೋ ಸದನಗಳನ್ನು ಏರ್ಪಾಡು ಮಾಡುತ್ತಿದೆ. ಕೇಂದ್ರ ಸರ್ಕಾರ ಇದಕ್ಕೆ ಸ್ವಲ್ಪ ಹಣ ಕೊಡುತ್ತದೆ. ಸಂಸ್ಥಾನ ಸರ್ಕಾರವೂ ಎಷ್ಟು ಸಾಧ್ಯವೋ ಅಷ್ಟನ್ನು ಕೊಡುತ್ತದೆ. Philonthropists ಮುಂದೆ ಬಂದು ಇಂಥ ಗೋ ಸದನಗಳನ್ನು ಮಾಡಬಹುದು. ಈ ದೃಷ್ಟಿಯಿಂದ 20ನೇ ಕ್ಲಾಜಿನಲ್ಲಿ ಕೆಲವು Institution ಪ್ರಾರಂಭ ಮಾಡುವುದಕ್ಕೆ ಅವಕಾಶ ಮಾಡಿಕೊಂಡಿದ್ದೇವೆ.

ಇದು ಬಹಳ ಚಿಕ್ಕ ಮಸೂದಾ ಕಾನೂನು. ಇದರ ಉದ್ದೇಶ ನಾನು ಹೇಳಿದ ಹಾಗೆ ಈಗ ಜಾರಿಯಲ್ಲಿರುವ ಬೇರೆ ಬೇರೆ ಕಾನೂನುಗಳನ್ನು ಏಕರೂಪತೆಗೆ ತರುವುದೇ ಆಗಿದೆ. ಸುಪ್ರೀಂ ಕೋರ್ಟ್ ಮತ್ತು ಹೈ ಕೋರ್ಟ್ ಮಾಡಿರುವ ಕೆಲವು ತೀರ್ಮಾನಗಳ ಪ್ರಕಾರ ತಿದ್ದುಪಡಿ ಮಾಡಿ ಈ ಕಾನೂನಿನಲ್ಲಿ ಅಡಕ ಮಾಡಿದ್ದೇವೆ. ಮಾನ್ಯ ಸಭೆ ಇದಕ್ಕೆ ಒಪ್ಪಿಗೆ ಕೊಡುತ್ತಾರೆಂದು ನಾನು ನಂಬಿದ್ದೇನೆ.

† **Sri G. V. GOWDA** (Palya).—Mr. Speaker, Sir, just now the Hon'ble Minister was pleased to observe that in view of the decision of the Supreme Court and the High Court, it has been possible to the Government to bring such a measure as this.

Mr. SPEAKER.—Not that, "it has been possible"; but it is to meet the situation arising out of that.

Sri G. V. GOWDA.—It has been possible because the whole enactments have been challenged. Though I have not read the judgments, there cannot be a total prohibition according to the decision of the Supreme Court. So, so far as prohibition of cow-slaughter is concerned, though it is a welcome measure, how far it will stand the test of the decision already arrived at, we have to see. Clause 4 is a good measure but how far it can stand the test of the decision we have got to see. Then, Sir, for the enforcement of the provisions the appointment of a competent authority is contemplated and the competent authority, according to me, will be the local authority. They will be the panchayets, the Taluk Development Boards or the Municipalities. The Government, under clause 3, are going to delegate that power to these local authorities to enforce the provisions of this Bill. The power of revision

is kept by the Government and also it is sought to be delegated to any office of the State Government under clause 1 of clause 6. The Veterinary Doctors will come under clause 18, to certify whether the animal is fit for slaughter, etc. For other things, it is the local authority or the non-official body.

Mr. SPEAKER.—The State Government by notification may appoint a person or a body of persons.

Sri G. V. GOWDA.—The clause does not refer to an officer of the Government. Power is sought to be delegated to the local authorities.

So far as the power of revision is concerned, what I fear is supposing a certificate is granted, much against the conditions laid down in the bill and it happens that some gentleman files a revision petition. The certificate is granted and the animal is killed. The Government considers the revision petition and finds that the certificate given is bad.

Mr. SPEAKER.—Is it not a matter to be provided for in the rules ?

Sri G. V. GOWDA.—No, Sir. I would only ask if action would be taken under the penalty clause to punish the person who wrongfully gives a certificate.

Mr. SPEAKER.—The bill cannot provide for all contingencies. That is a matter for implementation. Action would be taken if the competent authority acts *mala fide*.

Sri G. V. GOWDA.—It is my apprehension that it is likely that the local authorities which are delegated with this power under clause 3 may not use it properly.

So far as clause 10 is concerned, unless the person knowingly keeps flesh of an animal or cow, he cannot be punished.

Sri M. V. KRISHNAPPA.—There has been some lapse on my part. I am not pressing for the adoption of clauses 10 and 13. I ought to have said this earlier, but I forgot.

Sri G V. GOWDA.—That is good, Sir. In regard to the establishment of institutions for taking care of cows and other animals, I do not think it would be possible for the State Government to establish such institutions. If private agencies come forward with offer of voluntary efforts, Government may encourage them with grants.

†ಶ್ರೀ ಎಚ್. ಆರ್. ಕೇಶವ ಮೂರ್ತಿ.—ಕ್ಲಾಜೆಸ್ 4 ಮತ್ತು 5 ರಲ್ಲಿ ಒಂದು ತಿದ್ದುಪಡಿಯನ್ನು ಮಾಡಿಕೊಳ್ಳಬೇಕಾಗುತ್ತದೆ. ಅದು ಏನಂದರೆ ಕ್ಲಾಜ್ 4 ರಲ್ಲಿ Cow or calf or she-baffalo ಎಂಬುದಾಗಿ ಹೇಳಿದ್ದೀರಿ, ಕ್ಲಾಸ್ 5 ರಲ್ಲಿ other than a calf of she-buffalo ಎಂಬುದಾಗಿ ಮಾತ್ರ ಹೇಳಿದ್ದೀರಿ. Calf of a he-baffalo ಅದನ್ನು ಸಾಯಿಸುವುದಕ್ಕೆ ನರ್ಟಿಫಿಕೇಟ್ ಬೇಕಾಗಿಲ್ಲ ಎಂದು ಕಾಣುತ್ತದೆ ಅದನ್ನು ಸರಿಮಾಡಬೇಕಾಗುತ್ತದೆ.

ಕ್ಲಾಜ್ 5 (ಬ) ಹೇಳಿರುವಂತೆ ಮಾಡುವುದಾದರೆ ಹಾಲು ಕೊಡದೆ ಇದ್ದ ಹಸು, ಬರಡು ಹಸು ಇದ್ದ ಪಕ್ಷದಲ್ಲಿ ಅದನ್ನು ಬೇಸಾಯ ಮಾಡುವುದಕ್ಕೆ ಉಪಯೋಗಿಸಿಕೊಳ್ಳಲು ಬರುವುದಿಲ್ಲವೇ ಎಂಬುದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. 14 ವರ್ಷ ವಯಸ್ಸಿನ ಲಿಮಿಟ್ ಬೇಕಾದರೆ ಹಾಕಿ ಇಲ್ಲದೇ ಇದ್ದರೆ ಬಿಟ್ಟು ಬಿಡಿ. ನಾನು ಹೇಳುವುದು ಇಷ್ಟೇ. ಆ ಪ್ರಾಣಿಗಳಿಗೆ ಯಾವುದಾದರೂ ಇಂಜ್ಯೂರಿ, ಅಥವಾ ಡಿಫಾರ್ಮಿಟಿ ಆಗಿದ್ದ ಪಕ್ಷದಲ್ಲಿ ಅಂತಹವುಗಳನ್ನು ಸಾಯಿಸುವುದಕ್ಕೆ ಅನುಮತಿಕೊಡಿ, ಅದಕ್ಕೆ ಯಾರೂ ಬೇಡ ಎನ್ನುವುದಿಲ್ಲ. ಹಾಗಲ್ಲದೆ incapacitated for breeding, or giving milk ಅಂತಹವುಗಳನ್ನು ಹಾಗೆಯೇ ಬಿಟ್ಟು ಬಿಡಿ. ಇದು ರೀಸನಬಲ್

(ಶ್ರೀ ಎಚ್. ಆರ್. ಕೇಶವಮೂರ್ತಿ)

ಅಲ್ಲವೇ ಏಂಬುದನ್ನು ಸ್ವಲ್ಪ ಯೋಚನೆ ಮಾಡಿ. Incapaitated for breeding or giving milk ಎನ್ನುವುದನ್ನು ತೆಗೆದುಹಾಕಿ ಎಂದು ಹೇಳುತ್ತೇನೆ. ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ. ಎಂ. ದೇವ್.—ಮಾನ್ಯ ರೆವಿನ್ಯೂ ಸಚಿವರು ಹೇಳಿದ ಮಾತುಗಳು ಮುತ್ತಿನಂಥ ಮಾತುಗಳು. ಈ ಬಗ್ಗೆ ಈಗಾಗಲೇ ಹೈಕೋರ್ಟಿನಲ್ಲಿ ಒಂದು ಕೇಸು ಸರ್ಕಾರಕ್ಕೆ ವಿರೋಧವಾಗಿ ತೀರ್ಮಾನವಾಗಿದೆ. ಅದನ್ನು ಬಳಸಿ ಕಾನೂನು ಮಾಡಲು ಈ ಪ್ರಯತ್ನ ನಡೆದಿದೆ. Mahomed Hanief and others *Vs.* Qureshi. ಈ ತೀರ್ಮಾನಗಳಲ್ಲಿ ಹಿಂದಿನ ಸರ್ಕಾರಗಳ ಆಜ್ಞೆ ಅಕ್ರಮ ಎಂದಾಗಿದೆ. ಈ ಸುಪ್ರೀಂ ಕೋರ್ಟಿನ ತೀರ್ಮಾನವನ್ನೂ ವ ತ್ತು ನಮ್ಮ ರಾಜ್ಯಾಂಗದ ನಿಯಮಗಳನ್ನೂ ದಾಟಿಕೊಂಡು ಹೋಗಲು ಈಗ ಈ ಶಾಸನವನ್ನು ಮಾಡಲು ಹೊರಟಿರುವಂತೆ ಕಂಡುಬರುತ್ತಿದೆ. ಇದರಿಂದ ಕೋರ್ಟುಗಳ ಪಾವಿತ್ರತೆಗೆ ಧಕ್ಕೆ ಬರುತ್ತದೆ. Section 5 (2) ಹೇಳಿರತಕ್ಕ ವಿಚಾರ ವಿರೋಧಾಭಾಸವಾಗಿದೆ. 14 ವರ್ಷದಲ್ಲಿ ನೂರಕ್ಕೆ 90 ದನಗಳು ಅನುಪನ್ನ ನೀಗುತ್ತವೆ. ಹಾಗಿದ್ದರೂ ಇಲ್ಲಿ ಹೀಗೆ ಹೇಳಿದ್ದಾರೆ.

The animal is over the age of 14 years.

Mr. SPEAKER.—Suppose it is reduced to 12 years. Will the member be content ?

Sri V. M. DEO.—No, Sir. ಈ ವಿಚಾರದಲ್ಲಿ ಯಾರೂ ಒಂದು ಸರ್ಟಿಫಿಕೇಟನ್ನು ಕೊಡುವುದಕ್ಕಾಗುವುದಿಲ್ಲ ; ಆದರೂ ಸರ್ಟಿಫಿಕೇಟು ಬೇಕೆ ಬೇಕು ಎಂದು ಹೇಳಿದ್ದಾರೆ. ಅದೂ ಅಲ್ಲದೆ ಸೆಕ್ಷನ್ 5 (1) ರಲ್ಲಿ ಹೀಗೆ ಹೇಳಿದೆ :—

> "5 (1) Notwithstanding any law, custom or usage to the contrary, no person shall slaughter or cause to be slaughtered or offer or cause to be offered for slaughter any animal, other than a calf of she-buffalo, unless he has obtained in respect of such animal a certificate in wirting from the competent authority appointed for the area that the animal is fit for slaughter."

ರೇಬೀಸ್ ಇದ್ದರೂ ಕೂಡ ಜನರು ಆ ಮಾಂಸವನ್ನು ತಿನ್ನುವುದಿಲ್ಲ. ಆದರೆ ಆಗಲೂ ಆ ದನಗಳನ್ನು ಕೊಲ್ಲಬಾರದು ಎಂದು ಹೇಳುತ್ತೀರಾ ? ಹಾಗೆ. ಒಟ್ಟಿನಲ್ಲಿ ಜಾತೀಯತೆ ದೃಷ್ಟಿಯಿಂದ ನಿಷೇಧಿಸಿದ್ದೀರಿ. ಸರ್ಕಾರದವರು ಹೀಗೆ ತೀರಾ ತಮ್ಮ ಬುದ್ಧಿವಂತಿಕೆಯನ್ನು ಉಪಯೋಗಿಸುವುದಕ್ಕೆ ಹೋಗಿ ತಮ್ಮ ಪ್ರಾಮಾಣಿಕತೆಯನ್ನು ಕಳೆದುಕೊಳ್ಳುತ್ತಾರೆ.

(2) A certificate under sub-section (1) shall be granted by the competent authority, after it has for reasons to be recorded in writing, certified that :—

(*a*) the animal is over the age of fourteen years, or

(*b*) the animal has become permanently incapacitated for breeding, draught or giving milk due to injury, deformity or any other cause.

(3) No certificate under sub-section (1) shall be granted if the animal is suffering from any disease which makes its meat unwholesome for human consumption. Rabies ನಿಂದ ನರಳುತ್ತಿರುವ ದನಗಳ ಮಾಂಸವನ್ನು ಜನ ತಿನ್ನುವುದಿಲ್ಲ. Its meat become unwholesome for human consumption. ಇಂಥ ಸಂದರ್ಭದಲ್ಲಿ ಆ ಪ್ರಾಣಿಗಳನ್ನು ಏನು ಮಾಡಬೇಕು ? ಇವುಗಳಿಗೆ ರಕ್ಷಣೆ ಕೊಡತಕ್ಕವರು ಯಾರು ?

Mr. SPEAKER.—Does the member want that diseased animal should not be killed ? Suppose it is necessary in the interest of the public. If it suffering from an infectious disease.

ಶ್ರೀ ಎ. ಎಂ. ದೇವ್.—ಈ ಮನೂದೆಯು ತಾತ್ಪರ್ಯ ಹಾಗಾಗುತ್ತದೆ. ರಿಲಿಜಿಯಸ್ ಪರ್ಪಜಸ್‌ಗೆ ಹನುಗಳನ್ನು ಕೊಲ್ಲಬೇಕೆಂದು ಎಲ್ಲಿ ಇದೆ ? Even in such circumstances you cannot kill the animal as per the provisions of this Bill. ಇದಕ್ಕೆಲ್ಲಿ ಪ್ರಾವಿಜನ್ ಮಾಡಿದ್ದೀರಿ ? ಒಟ್ಟಿನಲ್ಲಿ ಹೇಳುವುದಾದರೆ ಇದೆಲ್ಲಾ ಒಂದು ದೊಡ್ಡ ಕಾಂಪ್ಲಿಕೇಟಿಡ್ ಬಿಲ್ಲಾಗುತ್ತದೆ. ಒಂದು ಕಡೆ ಸುಪ್ರೀಂ ಕೋರ್ಟಿನ, ಇನ್ನೊಂದು ಕಡೆ ನಮ್ಮ ಹೈಕೋರ್ಟಿನ ತೀರ್ಮಾನಗಳನ್ನು ಡಿಫೀಟ್ ಮಾಡಲು, ಆದರೂ ತಾತ್ಪರ್ಯ ಹಿಂದಿನಂತೆಯೇ ಇರಿಸಲು ಸರ್ಕಾರದವರು ಈಗ ಈ ಮನೂದೆಯನ್ನು ತರಲು ಹೊರಟಿರುವಂತೆ ಕಾಣುತ್ತದೆ.

> "Power of revision.—(1) The State Government may at any time, for the purpose of satisfying itself as to the legality or propriety of any order passed by a competent authority, granting or refusing to grant any certificate under section 5, call for and examine the records of the case and may pass such order in reference thereto as it thinks fit."

ಇದನ್ನು ನೋಡಿದರೆ ಎಷ್ಟು ಕಾಲ ತಳ್ಳಿದರೆ ಅಷ್ಟೇ ಸಾಕು ಎಂಬ ಭಾವನೆ ಇದ್ದಂತೆ ಕಾಣುತ್ತದೆ ಕಾರಣ, ಯಾರಾದರೂ High Courtಗೆ ಕೊಂಡೊಯ್ದರೆ ಹಿಂದಿನಂತೆಯೇ ಆಗುತ್ತದೆಂಬುದು ಸರ್ವ ವಿದಿತ. ಆದರೆ, ಅಷ್ಟಾಗಬೇಕಾದರೆ ಕಾಲ ವಿಳಂಬವಾಗುತ್ತದೆ ; ಆಗ ನೋಡಿಕೊಂಡು, ಆಗಲೂ ಇಂಥಾ ಕೆಲಸ ಮಾಡಬಹುದೇನೋ ಎಂಬ ಭಾವ. ಆದರೆ ನಮ್ಮ ನೀತಿ ಇಷ್ಟು ಕೆಳಗಿಳಿಯಬಾರದು. ಇದನ್ನು ನೋಡಿದರೆ ನಾವೀಗ ಕೋರ್ಟನ್ನು ಕೂಡ ನಂಬುವ ಸ್ಥಿತಿಯಲಲ್ಲ. ಆದುದರಿಂದ ಇವೆಲ್ಲಾ ನೂಪರ್‌ಫ್ಲುಯಸ್ ಕ್ಲಾಜುಗಳೆಂದು ಹೇಳುತ್ತೇನೆ.

> "subject to the provisions of sub-section (1) any order passed by the competent authority granting or refusing to grant a certificate, and any order passed by the State Government under sub-section (1), shall be final and shall not be called in question in any court."

ಇಲ್ಲಿ ಈ ರೀತಿ ಹೇಳಿರತಕ್ಕದ್ದು Adding insult to injury ಎಂದು ಹೇಳಿದ ಹಾಗಾಯಿತು. ಇನ್ನು ಸಿಬ್ಬಂದಿ ವಿಚಾರ, ಅದರ ಖರ್ಚು ಇವುಗಳಿಗೆ ಬಂದರೆ :—

20. Establishment of institutions for taking care of cows or other animals.

ಇದುವರೆಗೂ ಇದ್ದ ನೈತಿಕ ಮಟ್ಟವನ್ನು ಕಳೆದುಕೊಳ್ಳಬಾರದೆಂದು ಇದ್ದರೆ, ಸರ್ಕಾರದವರು ಬೇರೆ ಬಿಲ್ಲನ್ನು ತರಲಿ...

Mr. SPEAKER.—When it is brought under the Budget the member can debate it and throw it out.

ಶ್ರೀ ಎ. ಎಂ. ದೇವ್.—ಅದು ಹೇಗೆ ಸಾಧ್ಯ ? ನಾನು ಹೇಳುವುದಿಷ್ಟೆ...

Mr. SPEAKER.—Let him not generalise to that extent, because other Members may think that no law should be brought hereafter.

ಶ್ರೀ ಎ. ಎಂ. ದೇವ್.—ನಮ್ಮ ನೈತಿಕ ಮಟ್ಟ ಕೆಡಿಸಿಕೊಳ್ಳುವುದು ಬೇಡ...

Mr. SPEAKER.—Why bring in all this when all have supported ?

6-00 P.M.

ಶ್ರೀ ಎ. ಎಂ. ದೇವ್.—ನಾನು ಹೇಳುವುದೇನೆಂದರೆ, ಈ ಕಾನೂನಿನೊಳಗೆ ರಾಜ್ಯಾಂಗವನ್ನು ಅಪವಿತ್ರಗೊಳಿಸುವುದಕ್ಕೆ ಎಂದು ಮಾಡಿದರೆ ಇದರಿಂದ ನೈತಿಕ ಮಟ್ಟ ಹೋಗುತ್ತದೆ. ಈ ತರಹ ಕೆಲಸಗಳನ್ನು ಮಾಡುವುದಕ್ಕೆ ಬದಲಾಗಿ ಬರೀ ಹಿಂದೂಗಳೇ ಇಲ್ಲಿ ಮೆಜಾರಿಟಿಯಿರುವುದರಿಂದ ಇದನ್ನು ತರುವಾಗ ತೊಂದರೆಯಾಗುತ್ತದೆ. ಏಕೆಂದರೆ ಹೈಕೋರ್ಟಿನಲ್ಲಿ ರಿಟ್ಟು ಹೋಗುವ ಪ್ರಸಂಗ

(ಶ್ರೀ ಎಂ. ಎಂ. ದೇವ್)

ಬರಬಹುದು. ಇದರಿಂದ ದೇಶದ ಮಟ್ಟ ಖಂಡಿತ ಹಾಳಾಗಿ ಹೋಗುತ್ತದೆ. ಮೊದಲನೇದು ಇದನ್ನು ಈಗ ತರದೇ ಇರುವುದು, ಎರಡನ್ನೇದು ನಮ್ಮ ಹಿಂದೂ ಸಂಸ್ಕೃತಿಗಳಲ್ಲಿ ವೇದೋಪನಿಷತ್ತುಗಳ ಕಾಲದಲ್ಲಿ, ಸೋಮ, ಸುರಾ ಇತ್ಯಾದಿ ಮಾಂಸಗಳನ್ನು ತಿನ್ನುತ್ತಿದ್ದಂತಹ ಕಾಲಕ್ಕೆ ಈಗ ಹೋಗುವುದನ್ನು ಬಿಡಬೇಕು, ಇದರಿಂದ ನೈತಿಕ ಅಧಃಪತನವಾಗುವಂತೆ ಮಾಡಬಾರದು. ನೆಹರೂರವರೂ ಕೂಡ ರಾಜ್ಯಾಂಗದ ಬಗ್ಗೆ ಬಹಳವಾಗಿ ಹೇಳಿದ್ದಾರೆ. ನಮ್ಮ ಮಟ್ಟ ಕೆಳಕ್ಕೆ ಹೋಗುವಂತೆ ಇಂತಹ ಕಾನೂನು ತರಲು ಹೋಗಬೇಡಿ ಎಂದು ನಾನು ಸರಕಾರವನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇದನ್ನು ಇನ್ನೂ ಚೆನ್ನಾಗಿ ಯೋಚನೆ ಮಾಡಿ, ನಾನು ಹೇಗೆ ಹೇಳಿದರೂ ನೀವು ಹೇಗೂ ಪಾಸು ಮಾಡುತ್ತೀರಿ. ಆದರೆ ಇದರಿಂದ ನೈತಿಕ ಮಟ್ಟವೂ ಇಳಿಯುತ್ತದೆ ಮತ್ತು ರಾಷ್ಟ್ರದ ಅಧಃಪತನವೂ ಆಗುತ್ತದೆ. ಆದುದರಿಂದ ತಾವು ಇನ್ನೂ ಚೆನ್ನಾಗಿ ಪರಿಶೀಲನೆ ಮಾಡಿ ಈ ಬಿಲ್ಲನ್ನು ವಾಪಸು ತೆಗೆದುಕೊಳ್ಳಬೇಕೆಂದು ನಾನಿಲ್ಲಿ ಸೂಚಿಸುತ್ತಿದ್ದೇನೆ.

† ಶ್ರೀ ಎಂ. ಆರ್. ಪಾಟೀಲ್.—ಸ್ವಾಮಿ, ಈ ಬಿಲ್ಲಿನೊಳಗಿರುವ ಸೆಕ್ಷನ್ನು 20ರ ಬಗ್ಗೆ ಒಂದು ಮಾತನ್ನಿಲ್ಲ ಹೇಳಬೇಕಾಗಿದೆ. ಇದರೊಳಗಿರುವ ಸಬ್-ಕ್ಲಾಜು (2)ರಲ್ಲಿ "The State Government may provide by Rules for the proper management of such institutions, etc., etc., ಎಂದಿದೆ. ನನಗೆ ಬಂದಿರುವ ಸಂಶಯ ಸಬ್ ಕ್ಲಾಜು (3) ರಲ್ಲಿ ಅದು ಹೀಗಿದೆ: (3) The State Government or subject to the previous sanction of the State Government the local authority society, or body of persons or association establishing an institution under sub-section (*a*) may levy such fees as may be prescribed for the maintenance of such institutions" ಎಂದಿರುವುದರಲ್ಲಿ "Levy such fees" ಎಂದರೆ ಇದರಂತೆ ಯಾರ ಮೇಲೆ ಫೀ ಹಾಕಬೇಕು ಮತ್ತು ಯಾರ ಕಡೆಯಿಂದ ಹಾಕಬೇಕು ಎನ್ನುವುದನ್ನು ಇದರಲ್ಲಿ ಸ್ಪೆಸಿಫೈ ಮಾಡಿಲ್ಲ. ಮತ್ತು ಫೀ ಏನು ಎನ್ನುವುದಕ್ಕೆ ಇದರಲ್ಲಿ ಮ್ಯಾಕ್ಸಿಮಂ ಇರಬೇಕೇ ಮಿನಿಮಂ ಇರಬೇಕೇ ಎನ್ನುವುದನ್ನೂ ಪ್ರಿಸ್‌ಕ್ರೈಬು ಮಾಡಿಲ್ಲ. ಇದರಿಂದ ಮುಂದೆ ಇದರ ಬಗ್ಗೆ ಹೈಕೋರ್ಟಿನಲ್ಲಿ ಹೋಗಿ ಚಾಲೆಂಜು ಮಾಡಲಿಕ್ಕೂ ಬರಬಹುದು. ಅದರಿಂದ ಇದನ್ನು ಸರಕಾರ ಸ್ವಲ್ಪ ಯೋಚನೆ ಮಾಡಬೇಕೆಂದು ಇಲ್ಲಿ ಸೂಚಿಸುತ್ತಿದ್ದೇನೆ ಅದರಿಂದ, ಇದರೊಳಗೆ ಯಾರ ಮೇಲೆ ಫೀ ಹಾಕಬೇಕು, "Body of persons" ಎಂದರೆ ಯಾರ ಮೇಲೆ ಎನ್ನುವುದನ್ನು ಇಲ್ಲಿ ವಿಶದೀಕರಿಸಬೇಕು ಮತ್ತು ಮ್ಯಾಕ್ಸಿಮಂ ಮತ್ತು ಮಿನಿಮಂ ಏನು ಎನ್ನುವುದನ್ನು ಸರಿಯಾಗಿ ನಿಗದಿ ಮಾಡಿದರೆ ಸರಿಕಾಣುತ್ತದೆ.

Sri. M. GHOUSE MOHIUDDIN (Raichur).—Mr. Speaker, Sir, I support the principles underlying this Bill, because it is meant for the preservation of the cattle wealth of the country, which is very important. But the mere legislation of such a Bill will not achieve the object. There are other matters which are to be attended to. That is, we have to take care of the cattle by adopting scientific means. This Bill is meant as a uniform law for all parts of the State. There are some parts where such legislation is not in force. In this Bill clause 4 completely prohibits the slaughter of cows. In other parts of Bombay, if the animal is unfit, that may be slaughtered. So there should be a slight change in this clause, because if all the cows which are over-aged or unfit are to be kept, who is going to take care of these animals. In *Goshalas* they can keep only such cows which yield milk. Here also, some slight change is to be made. The penalty prescribed is very harsh. The penalties are 6 (six) months imprisonment or 500 rupees fine. So, a slight amendment I suggest for clause 12. With these suggestions I thank you, Sir.

† ಶ್ರೀ ಎಸ್. ಎಂ. ಗುರ್ರೆಡ್ಡಿ (ಮುದ್ದೆಬಿಹಾಳ್).—ಅಧ್ಯಕ್ಷರೆ, ಗೋಹತ್ಯೆ ರಕ್ಷಣೆಕಾಯಿದೆ ಪ್ರಕಾರ, Exemption ಕ್ಲಾಜಿನಲ್ಲಿ ಇನ್ನೊಂದನ್ನೂ ಇನ್‌ಕ್ಲೂಡ್ ಮಾಡಿದರೆ ಸರಿ ಅಂತ ಕಾಣುತ್ತೆ ಎಂದು ಸಂಬಂಧಪಟ್ಟ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಈಗ ಮುಂಬಯಿ ಕರ್ನಾಟಕ

ಏರಿಯಾದಲ್ಲಿ ಈಗಾಗಲೇ ಗೋಹತ್ಯೆ ನಂರಕ್ಷಣೆ ಕಾಯಿದೆ ಜಾರಿಯಲ್ಲಿದ್ದರೂ, ಸಾವಿರಾರು ಹಸುಗಳು ಕಟುಕನ ಬಾಯಿಗೆ ಹೋಗುತ್ತವೆ. ಗೋಹತ್ಯೆದ ಪ್ರಿವೆನ್‌ಷನ್ ನರಿಯಾಗಿ ನಡೆಯುತ್ತಾ ಇಲ್ಲ. ಈ ಎಕ್ಸೆಂಷನ್ ಕ್ಲಾಸ್ ಪ್ರಕಾರ ಎಲ್ಲ ಹಸುಗಳನ್ನು ನಾಶಪಡಿಸಲಕ್ಕೆ ಬರುವುದಿಲ್ಲ. ಒಕ್ಕಲಗರಿಗೆ ಮತ್ತು ರೈತರಿಗೆ ಈ ಪುಂಡು ದನಗಳು ಅವರ ಜಮೀನಿಗೆ ನುಗ್ಗಿ ಅವರ ಹೈರನ್ನು ಹಾಳು ಮಾಡುತ್ತವೆ. ಬಿಜಾಪುರದಲ್ಲಿ ಅಂಥ ದನಗಳ ಸಾವಿರಾರು ಇರುತ್ತವೆ. ಅವುಗಳ ಹಾವಳಿಯನ್ನು ತಪ್ಪಿಸಲು ಯಾವುದಾದರೂ ಒಂದು ಪ್ರಾವಿಷನ್ ಮಾಡಲಕ್ಕೆ ಸರಕಾರಕ್ಕೆ ಸಾಧ್ಯವಾಗುವುದಿಲ್ಲ. ಅಂಥ ತ್ಯಾಸು ಕೊಡುವ ದನಗಳನ್ನು ಹತೋಟಿಗೆ ತರಲು ಅಥವಾ ಅಂಥವನ್ನು ಕೊಲ್ಲಲಿಕ್ಕೆ ಪ್ರಾವಿಷನ್ ಮಾಡಬೇಕು.

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರು ಕೆಲವು ಬೆಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ನಾನು ಮೊದಲೇ ಹೇಳಿದ ಹಾಗೆ ಈ ಕಾನೂನುಗಳು ಹಳೆಯ ಮೈಸೂರು ಪ್ರದೇಶದಲ್ಲಿ ಮತ್ತು ಬೊಂಬಾಯಿ ಕರ್ನಾಟಕದಲ್ಲಿ ಇವೆ. ಈ ಕಾನೂನುಗಳಿಗೆ ನುಪ್ಪೀರ್ ಕೋರ್ಟ್ ಜಡ್ಜ್‌ಮೆಂಟ್ ಪ್ರಕಾರ ಕೆಲವು ತಿದ್ದುಪಡಿಗಳನ್ನು ತಂದು, ರಾಜ್ಯಕ್ಕೆಲ್ಲಾ ಯೂನಿಫಾರಂ ಲೆಜಿಸ್ಲೇಷನ್ ಮಾಡುವುದು ಒಂದು ಉದ್ದೇಶ. ಇದು ಹಿಂದಿನ ಕಾನೂನೇ, ಹೊಸದಾಗಿ ಏನೂ ತರುತ್ತಾ ಇಲ್ಲ. ಕನ್ನಡ ದೇಶದಲ್ಲಿ ಯೂನಿಫಾರಂ ಕಾನೂನು ಮಾಡುವ ದೃಷ್ಟಿಯಿಂದ ಇದನ್ನು ತಂದಿದೆ, ಅಷ್ಟೆ.

ಎರಡನೆಯದಾಗಿ ನಮ್ಮ ದೇಶದಲ್ಲಿ ಹಸುಗಳು ಬಹಳ ದಿನ ಬದುಕುತ್ತವೆ. 16 ವರ್ಷ ಬದುಕಿರುವ ಹಸುಗಳು ಇವೆ, ನಮ್ಮ ಇಂಡಿಯನ್ ಡೈರಿ ಇನ್ಸ್‌ಸ್ಟಿಟ್ಯೂಟಿನಲ್ಲಿ ಒಂದು ಹಸು 15 ಕರು ಕೊಟ್ಟಿದೆ. ಅದು ಅದರ ಒಂದು ವರ್ಷದಿಂದಲೇ ಕರು ಹಾಕುವುದಕ್ಕೆ ಪ್ರಾರಂಭ ಮಾಡಿತು, ವರ್ಷ ವರ್ಷಕ್ಕೂ ಕರು ಕೊಡುತ್ತಾ ಇದೆ, ಆದರೆ ಎತ್ತುಗಳು ಸಾಮಾನ್ಯವಾಗಿ, ಎರಡು-ನಾಲ್ಕು-ಆರು ಹಲ್ಲು ಬಿದ್ದ ಮೇಲೆ ಎಂಟು ವರ್ಷದೊಳಗೆ, 10-12 ವರ್ಷಗಳೊಳಗೆ ನವೆದು ಸತ್ತು ಹೋಗಿಬಿಡೆ. ಏಕೆಂದರೆ ಅವು ರಾತ್ರಿ ಹಗಲು ಗೇಯಬೇಕು. ಆದ್ದರಿಂದ ಅಂಥವಕ್ಕೆ 14 ವರ್ಷ ಎಂದು ಹಾಕುವುದು ನರಿಯಲ್ಲ ವೆಂದು ಕಂಡು ಅದಕ್ಕೆ ಒಂದು ತಿದ್ದುಪಡಿ ಇದೆ. ಅದರ ಪ್ರಕಾರ ಈ ಪ್ರಾಣಿಯ ಬಗ್ಗೆ ವರ್ಷವನ್ನು 14ರಿಂದ, 12ಕ್ಕೆ ಇಳಿಸುತ್ತದೆ.

ಇದು ಹಿಂದಿನ ಕಾನೂನೇ, ಏಕ ರೀತಿ ಕಾನೂನು ತರಬೇಕು, ಅನ್ನುವ ಉದ್ದೇಶದಿಂದ ತಂದಿದೆ ಇಷ್ಟು ಹೇಳಿ, ಇದನ್ನು ಮಾನ್ಯ ಸಭೆ ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ವಿ. ರೇವಣ್ಣಸಿದ್ದಪ್ಪ (ತಿಪಟೂರು).—ಈ ಕಾನೂನು ಜಾರಿಯಲ್ಲಿದ್ದ ಯಾವ ಊರಿ ನಲ್ಲಿಯೂ ಗೋಹತ್ಯೆ ನಿಂತಿದೆ. ಕೋಲಾರ ಜಿಲ್ಲೆಯ ಒಂದು ಉದಾಹರಣೆಯನ್ನು ನಾನು ಹಿಂದೆಯೇ ಹೇಳಿದ್ದೆ. ಆ ಕೇಸಿನ ಬಗ್ಗೆ ಏನೂ ಆಕ್ಷನ್ ತೆಗೆದುಕೊಳ್ಳಲಿಲ್ಲ. ತಿರುಗಿ ಈ ಕಾನೂನನ್ನು ತಂದು ಗೋವುಗಳನ್ನು ನೀವು ಉದ್ಧಾರಮಾಡುವುದಿಲ್ಲ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ನೀವು ಐದನೇ ಕ್ಲಾಜಿನ ಪ್ರಕಾರ ಸ್ಲಾಟರು ಮಾಡುವು ದಾದರೆ 70 ಪರ್ಸೆಂಟಿನಷ್ಟು ಬ್ರೀಡಿಂಗಿಗೆ ರಾಯಕ್ ಆಗದೆ ಇರುವ ಎತ್ತುಗಳಿರುತ್ತವೆ, ಹಾಗೆಯೇ ಹಾಲು ಕೊಡದೆ ಇರುವ ಹಸುಗಳೂ ಇರುತ್ತವೆ. ಹಾಗೆಂದು ಸ್ಲಾಟರಿಗೆ ಸರ್ಟಿಫೈ ಮಾಡಿದರೆ, ಜನಗಳಿಗೆ ಬೇಸಾಯಕ್ಕೆ ಸವಲತ್ತು ಇಲ್ಲದೆ ಹೋಗಬಹುದು.

ಶ್ರೀ ಎಂ. ವಿ. ಕೃಷ್ಣಪ್ಪ.—ತಾವು ಅನುಭವದಿಂದ ಹೇಳುತ್ತಾ ಇದ್ದೀರಿ. ಆದರೆ breeding capacity ಇಲ್ಲದೆ ಇರುವ ಎತ್ತುಗಳೆಲ್ಲವನ್ನೂ, ಕೊಲ್ಲಲೇಬೇಕು ಅಂತ ಕಾನೂನಿನಲ್ಲಿ ಇಲ್ಲ. ವೆಟರ್ನರಿ ಆಫೀಸರಿಗೆ ಡಿಸ್‌ಕ್ರಿಷನ್ ಇದೆ. ಉಪಯೋಗಕ್ಕೆ ಬರುವ ಹಸು ಎತ್ತುಗಳ ಬಗ್ಗೆ ಅವರು ಸರ್ಟಿಫಿಕೇಟ್ ಕೊಡಬಾರದು. ಲೋಕಲ್ ವೆಟರ್ನರಿ ಆಫೀಸರುಗಳಿಗೆ ಈ ಪಶುಗಳಲ್ಲ ನವುಗಿಂತಲೂ ಹೆಚ್ಚು ಕನಿಕರ, ದಯೆ ಇರುತ್ತದೆ. ಅವರು ರೈತರ ಹಿತದೃಷ್ಟಿ ಪ್ರಾಣಿಗಳ ಹಿತದೃಷ್ಟಿ ಇಟ್ಟುಕೊಂಡು ಡಿಸ್‌ಕ್ರಿಷನ್ ಉಪಯೋಗಿಸುತ್ತಾರೆ. ಕರು ಹಾಕದೆ ಇರುವ ಹಸು ಅಥವ useless bull ಅನ್ನು ಕೊಲ್ಲುವುದಕ್ಕೆ ಸರ್ಟಿಫಿಕೇಟ್ ಕೊಡಬೇಕು ಅಂತ ಇಲ್ಲ. ಅವುಗಳಿಗೆ ರಕ್ಷಣೆ ಕೊಡುತ್ತೇವೆ.

Mr. SPEAKER.—The question is:

"That the Mysore Prevention of Cow-slaughter and Cattle Preservation Bill, 1963, be taken into consideration."

The motion was adopted.

CLAUSES 2 TO 4:

Mr. SPEAKER.—The question is :

"That Clauses 2 to 4, both inclusive, stand part of the Bill."

The motion was adopted.

Clauses 2 to 4 were added to the Bill.

CLAUSE 5.

Mr. SPEAKER.—There is an amendment.

Sri M. V. KRISHNAPPA.—Sir, I beg to move ;

"That in clause 5, in clause (*a*) of sub-clause (2) for the words 'fourteen years' the words 'twelve years' shall be substituted."

Mr. SPEAKER.—The question is :

"That in clause 5, in clause (*a*) of sub-clause (2) for the words 'fourteen years' the words 'twelve years' shall be substituted."

The motion was adopted.

Mr. SPEAKER.—The question is :

"That Clause 5, as amended, stand part of the Bill."

The motion was adopted.

Clause 5, as amended, was added to the Bill.

CLAUSES 6 TO 9.

Mr. SPEAKER.—The question is :

"That Clauses 6 to 9, both inclusive, stand part of the Bill."

The motion was adopted.

Clauses 6 to 9, both inclusive, were added to the Bill.

CLAUSE 10.

Mr. SPEAKER.—The Hon'ble Minister has already said that he is not particular about changing that clause. But I have got to put it to the House. The question is :

"That Clause 10 stand part of the Bill."

The motion was negatived.

Clause 10 was deleted from the Bill.

Mr. SPEAKER.—Now, the clauses have to be re-numbered. I will do that by virtue of the powers vested in me under the Rules. I will put the clauses numbering them as they are in the Bill, to vote.

The question is :

"That Clauses 11 and 12 stand part of the Bill."

The motion was adopted.

Clause 11 and 12 were added to the Bill.

CLAUSE 13.

Mr. SPEAKER.—The question is :

"That Clause 13 stand part of the Bill."

The motion was negatived.

CLAUSES 14 TO 22.

Mr. SPEAKER.—The question is :

"That Clauses 14 to 22, both inclusive, stand part of the Bill."

The motion was adopted.

Clauses 14 to 22 both inclusive were added to the Bill.

Clause 1, the Title and the Preamble.

Mr. SPEAKER.—The question is :

"That Clause 1, the Title and the Preamble stand part of the Bill."

The motion was adopted.

Clause 1, Title and the Preamble were added to the Bill.

Motion to pass.

Sri M. V. KRISHNAPPA.—I beg to move :

"That the Mysore Prevention of Cow-slaughter and Cattle Preservation Bill, 1963, as amended be passed."

Mr. SPEAKER.—The question is :

"That the Mysore Preservation of Cow-slaughter and Cattle Preservation Bill, 1963, as amended be passed."

The motion was adopted.

Mr. SPEAKER.—The House will now adjorn to meet again tomorrow at 1 O'clock.

The House adjourned at Twenty-five Minutes past Six of the Clock to meet again at One of the Clock on Thursday, the 12th December 1963.

WD 1805—GPB—900—30-1-1964